ಮಾವನವರ ಬಗ್ಗೆ ತಾನು ಸುಮ್ಮನೆ ಏನಾದರೂ ಊಹೆ ಮಾಡಬಾರದು.

'ಗೌರಿ, ಖರೆ ಹೇಳು. ಏನಾತಂತ ನೀ ಬಾಯ್ಬಿಟ್ಟ ಹೇಳದಿದ್ರ ನನಗ್ಯಾಂಗ ತಿಳೀಬೇಕು?... ವೀರೇಶ, ನೀ ಅರ ಹೇಳು ನಡದದ್ದೇನಂತ...'

'ಯವ್ವಾ, ನಾ ನಿನ್ನೆ ಚಂಜೀನಾಗ ದಗದಕ್ಕ ಬಂದಾಗ ಗೌರವ್ವನ ಚೀರೂ ದನಿ ಕೇಳಸ್ತು... ಬಾಗಲಾ ತಗದದ್ದಿತ್ತಂತ ಒಳಗ ಬಂದೆ... ಅಜ್ಜಾ ಬಿಡ್ರಿ... ಬಿಡ್ರಿ... ಅನ್ನೂದ ಕೇಳಿ, ಕೋಲಿ ಕಡೆ ಕಣ್ಣ ಹಾಸೀದೆ... ದೊಡ್ಡ ಸಾಹೇಬ್ರು...'

ಶಿರೀನ್ ನೆಲಕ್ಕೆ ಕುಸಿದಳು. ಅವಳ ತಲೆಯಲ್ಲಿ ಪ್ರಚಂಡ ಭೋರ್ಗರೆತ. ಒಂದೇ ಕ್ಷಣದಲ್ಲಿ ಮಾವನವರು ಎಂಬ ಗೌರವ ನೆಲಕಚ್ಚಿ, ಆ ಮನುಷ್ಯನ ಬಗ್ಗೆ ಅಸಹ್ಯ ಒತ್ತಿಕೊಂಡು ಬಂತು. ಈ ಮನುಷ್ಯ ಇಂಥವನೆ? ಗೌರಿ ಅವನ ಮೊಮ್ಮಗಳ ವಯಸ್ಸಿನವಳು... ಏಳೆಂಟು ವರ್ಷದ ಹುಡುಗಿಯಾಗಿದ್ದಾಗಿನಿಂದ ನೋಡಿದ್ದಾನ... ಅವಳ ಮೇಲೆ ಕಣ್ಣು ಹಾಕಿದನ? ಅದಕ್ಕೇ ನಿನ್ನೆಯಿಂದ ಒಂಥರಾ ಇದ್ದಾನ... ಅಪರಾಧೀ ಮನಸ್ಸು... ಅತ್ತೆ ಸತ್ತ ಮೇಲೆ ಒಬ್ಬಂಟಿಯಾಗಿದ್ದಾನೆ... ಹಳ್ಳಿಯಲ್ಲಿ ಆತನ ಸಂಬಂಧಗಳೇನಿವೆಯೊ... ತನಗಾದರೂ ಏನು ಗೊತ್ತು? ಆತನ ಚಾರಿತ್ರ್ಯ ಶೀಲ ನಡತೆಗಳ ಬಗೆಗೆ ಅನುಮಾನ ಪಡುವ ವಿಚಾರವೇ ತನ್ನ ಮನಸ್ಸಿನಲ್ಲಿ ಬಂದಿರಲಿಲ್ಲ... ತನ್ನ ಊಹೆಗೂ ನಿಲುಕದ್ದು... ಶಿಶಿರ... ಶಿಶಿರನಿಗೆ ಗೊತ್ತಿತ್ತೆ ತನ್ನ ಅಪ್ಪನ ಕಚ್ಚೆಹರಕುತನದ ಬಗ್ಗೆ? ತಾನು ಯಾವಾಗಲೂ ಅಚ್ಚರಿಪಡುತ್ತಿದ್ದೆ... ಅಪ್ಪನ ಬಗ್ಗೆ ಅಂಥ ಆದರವೇನೂ ಇಲ್ಲ ಶಿಶಿರನಿಗೆ ಎಂದು. ಅತ್ತೆಯವರ ಬಗೆಗೆ ಮಾತ್ರ ಅವನಿಗೆ ತೀವ್ರ ಕಾಳಜಿ... ಅತ್ತೆಯ ನಗೆಯ ಹಿಂದಿನ ನೋವಿನ ಕಾರಣ ಇದೇ ಆಗಿತ್ತೆ? ಅವರು ಹೋದ ಮೇಲೆ ತಾವು ಹಳ್ಳಿಗೆ ಹೋದದ್ದು ಒಂದೆರಡು ಸಲ ಮಾತ್ರ, ಅದೂ ಒಪ್ಪತ್ತಿಗೆ. ಪ್ರಸಂಗ ಬಂದಾಗಲೆಲ್ಲ ಶಿಶಿರ ತಾನೊಬ್ಬನೇ ಹೋಗಿ ಬರುತ್ತಿದ್ದುದು ಇದೇ ಕಾರಣಕ್ಕಾಗಿಯೆ?... ಮಾವ ಹಳ್ಳಿಯಲ್ಲಿ ಒಬ್ಬರೇ ಕೈ ಬಾಯಿ ಸುಟ್ಟುಕೊಳ್ಳುತ್ತಿದ್ದಾರೆ, ನಮ್ಮ ಜೊತೆಯಲ್ಲೇ ಆರಾಮಾಗಿರಲಿ ಎಂದು ತಾನಂದಾಗಲೆಲ್ಲ, ಶಿಶಿರ ಮೌನವಾಗುತ್ತಿದ್ದುದು ಸಿಟ್ಟು ಬೇಸರ ಅಸಹ್ಯಗಳಿಂದಲೆ? ಈಗ, ದಿಢೀರನೆ ಲಾಕ್‌ಡೌನ್ ಘೋಷಿತವಾಗಿಲ್ಲದಿದ್ದರೆ, ಪ್ರತಿಸಲದಂತೆ ಒಂದೇ ಒಂದು ದಿನದಲ್ಲೇ ಅವರನ್ನು ಹೊತ್ತು ಹಾಕುತ್ತಿದ್ದನೇನೊ? ಹಿಂದೆಲ್ಲಾ ಅರ್ಥವಾಗದ ಮಾತುಗಳು ವಿಶೇಷ ಬಣ್ಣ ತಳೆದು ಶಿರೀನ್‌ಳ ಕಣ್ಣ ಮುಂದೆ ಕುಣಿಯತೊಡಗಿದವು...

ಛೆ. ತಾನು ಹಿಂದೆಮುಂದೆ ವಿಚಾರ ಮಾಡದೆ, ಮುಗ್ಧ ಗೌರಿಯ ಮೇಲೆ ಸಂಶಯಪಟ್ಟು ಏನೆಲ್ಲ ಒದರಾಡಿದೆ?... ಬಾಳಣ್ಣನಿಗೆ ಕೊಟ್ಟ ಮಾತು ಉಳಿಸಿಕೊಳ್ಳುವುದರಲ್ಲಿ ಸೋತಂತೆಯೇ ಆಯಿತಲ್ಲವೆ? ಮಾವನ ಮುದಿ ಕಣ್ಣುಗಳಲ್ಲಿನ ಕಾಮದ ಕಿಡಿ ಕಾಣಲಾರದ್ದು, ಆತನ ಹಾವಭಾವಗಳಿಂದ ಎಚ್ಚರಗೊಳ್ಳಲಾರದ್ದು ತನ್ನ ಸೋಲೇ ಅಲ್ಲವೆ? ವೀರೇಶ ಸಮಯಕ್ಕೆ ಸರಿಯಾಗಿ ದೇವರಂತೆ ಬಂದಿರದಿದ್ದರೆ?... ಅನಾಹುತ ತಪ್ಪಿದ್ದರೂ, ತಾನು ಮತ್ತು ಗೌರಿ ಬಾಳಣ್ಣನ ದೃಷ್ಟಿಯಲ್ಲಿ ಅಪರಾಧಿಗಳೇ ಅಲ್ಲವೆ? ಇದಕ್ಕೆ ಕ್ಷಮೆ ಇದೆಯೆ?... ತಾನೇನು ಮಾಡಬೇಕೀಗ? ಶಿಶಿರನ ಅಪ್ಪನ ಹೀನ ತಪ್ಪಿಗೆ ಪರದೆ ಎಳೆದು, ಗೌರಿಯನ್ನು ಅವಳ ಅಪ್ಪ ಬಾಳಣ್ಣನೊಡನೆ ಊರಿಗೆ ಕಳಿಸಿ ಬಿಡಬೇಕೆ? ಗೌರಿಯ ಮೇಲಿನ ದಾಳಿಯನ್ನು ವಿರೋಧಿಸಿ ಅವಳೊಡನೆ ನಿಲ್ಲಬೇಕೆ? ಮಾವನನ್ನು ಎಲ್ಲರ ಮುಂದೆ ನಿಲ್ಲಿಸಿ ಬೆತ್ತಲು ಮಾಡಬೇಕೆ? ಮನೆಯಿಂದ ಹೊರಗಟ್ಟಬೇಕೆ? ಛೆ. ಅದು ತನ್ನ ಸಂಸ್ಕಾರವೇ ಅಲ್ಲ. ಹಾಗೆ ಮಾಡಿದರೆ, ತನ್ನ ಸಂಸಾರದ ಮೇಲಾಗುವ ಪರಿಣಾಮಗಳೇನು... ಸಂಸಾರ ಒಡೆದರೆ ಮಕ್ಕಳ ಗತಿ ಏನು? ಶಿಶಿರ ಏನಂದುಕೊಂಡಾನು? ಆತ ಏನು ಮಾಡುತ್ತಾನೀಗ? ಬಾಳಣ್ಣ, ಗೌರಿ ರಂಪಾಟ ಮಾಡದಿರುವುದು, ಸುಮ್ಮನೆ ಊರಿಗೆ ಹೋಗುತ್ತೇನೆನ್ನುವುದು, ತನ್ನ ಸಂಸಾರದ ಬಗೆಗೆ ವಿಚಾರ ಮಾಡಿಯೇ ಅಲ್ಲವೆ? ಎಷ್ಟು ತಿಳಿವಳಿಕೆ ಉಳ್ಳವರು...